ಶ್ರುತಿ ಎಸ್. ರಮೇಶ್, ಮೈಸೂರು
*ಕೋಟಿಗೆ ಎಷ್ಟು ಸೊನ್ನೆ ಎಂಬುದೂ ತಿಳಿದಿಲ್ಲದ ಶಾಸಕರು ಕೋಟಿಗಳ ಮಾತನಾಡುತ್ತಾರಲ್ಲಾ...?*



ಅವರು ಸತ್ಯ, ದೇಶಪ್ರೇಮ, ನಿಷ್ಠೆ, ಎಂದೆಲ್ಲಾ ಏನೇನೂ ತಿಳಿಯದುದನ್ನೇ ಮಾತನಾಡುವಾಗ .........!

ಎಂ.ಬಿ. ಖೋದಾನಪುರ, ಸವದತ್ತಿ
*ಭೂಲೋಕದವರನ್ನು ದೇವಲೋಕಕ್ಕೂ, ದೇವಲೋಕದವರನ್ನು ಭೂಲೋಕಕ್ಕೂ ವರ್ಗಾಯಿಸಿದರೆ ಏನಾಗುತ್ತದೆ?*
ವರ್ಗಾವಣಾ ಅಧಿಕಾರಿಯ ಬದುಕು ಸ್ವರ್ಗಸದೃಶವಾಗುತ್ತದೆ!

ರವಿ ಎಂ. ಪೈ, ಕಾಸರಕೋಡ
*ತಾಯಿಗಿಂತ ದೇವರಿಲ್ಲ, ಪತ್ನಿಗಿಂತ...?*
Flavour ಇಲ್ಲ!

ಎನ್.ಆರ್. ದೇಸಾಯಿ, ರಾಯಚೂರು
*ಇನ್ನೊಬ್ಬರ ಸಂಸಾರದಲ್ಲಿ ಹುಳಿ ಹಿಂಡುವ ಜನರಿಗೆ ಏನು ಮಾಡಬೇಕು?*
ಚೆನ್ನಾಗಿ ಹಿಂಡುವವರಾದರೆ ಒಂದು ಲೆಮನ್ ಜ್ಯೂಸ್ ಸೆಂಟರ್ ಕೊಡಿಸಿಬಿಡಿ!

ಕೆ.ವಿ. ಶಿವಕುಮಾರ್, ಕಾಳಿಹುಂಡಿ
*ಹುಡುಗಿಯರ ಕೈಯಲ್ಲಿ ಬಳೆಗಳ ಸದ್ದೇ ಬರುತ್ತಿಲ್ಲವಲ್ಲ?*



ಅವು ಸೌಂಡ್ ಪ್ರೂಫ್ ಬಳೆಗಳಂತೆ!

ಹೆಚ್. ಆರ್. ಕಡಿವಾಲ, ಬಾದಾಮಿ
*ಈಗ ಅವಿಭಕ್ತ ಕುಟುಂಬಗಳೇ ಇಲ್ಲ, ಏಕೆ?*
ಪತ್ನಿಭಕ್ತರಿದ್ದರೆ ಅವಿಭಕ್ತತೆ ಸಾಧ್ಯವಿಲ್ಲವಾದ್ದರಿಂದ!

ಎನ್. ಪ್ರಕಾಶ್, ದೇವನಹಳ್ಳಿ
*ಸೂಕ್ಷ್ಮ ವೈರಸ್‌ಗೂ, ಭ್ರಷ್ಟಾಚಾರಕ್ಕೂ ಇರುವ ವ್ಯತ್ಯಾಸವೇನು ಸಾರ್?*
ವೈರಸ್ ಸೂಕ್ಷ್ಮ, ಭ್ರಷ್ಟಾಚಾರಿ ಒರಟ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ತಂದೆತಾಯಿಗಳು ಮಕ್ಕಳ ಭಾರ ಏಕೆ ಹೊರಬೇಕು?*
ತಂದೆ ಹೊರಲೇಬೇಕೆಂದಿಲ್ಲ, ಆದರೆ ತಾಯಿಗೆ ಒಂಬತ್ತು ತಿಂಗಳು ಅನಿವಾರ್ಯ!

ನರಸಿಂಹ ಎಂ. ಪೈ, ಹೊನ್ನಾವರ
*ಬಸವನ ಹಿಂದೆ ಬಾಲ, ಮದುವೆಯ ಹಿಂದೆ...?*
ಬಾಲಕ!

ಹೆಚ್.ಆರ್. ದೇಸಾಯಿ, ರಾಯಚೂರು
*ಗುರುವಿಗೆ ಪ್ರಶ್ನೆ ಕೇಳಿ ಪಡೆಯುವ ಉತ್ತರಕ್ಕೂ, ಅದೇ ಪ್ರಶ್ನೆ ಸುಧಾಳಿಗೆ ಕೇಳಿ ಪಡೆಯುವ ಉತ್ತರಕ್ಕೂ ಏನು ವ್ಯತ್ಯಾಸ?*
ಗುರುವಿನದು ಅರ್ಥವತ್ತಾದುದು, ಇಲ್ಲಿಯದು ರಸವತ್ತಾದುದು!

ಪವಿತ್ರ ಕೆ. ಪ್ರಭುಲಿಂಗಪ್ಪ, ರಾಯಚೂರು
*ಹೊಸ ರಾಜಕೀಯ ಪಕ್ಷವೊಂದನ್ನು ಸ್ಥಾಪಿಸಬೇಕೆಂದಿದ್ದೇನೆ; ಜನ ಮೆಚ್ಚುವ ಹೆಸರೊಂದನ್ನು ಸೂಚಿಸುವಿರಾ?*
ಪವಿತ್ರ ಪಕ್ಷ ಎಂದೇ ಇಡಿ; ಉದ್ಧಾರವಾದರೆ ಶುಕ್ಲಪಕ್ಷ, ಕೆಟ್ಟರೆ ಕೃಷ್ಣಪಕ್ಷ, ದಿವಾಳಿಯಾದರೆ ಪಿತೃಪಕ್ಷ ಎಂದು ಬದಲಾಯಿಸಿದರಾಯಿತು!

ಆರ್. ಮಧುಸೂದನ್, ಹಾಸನ
*ಸಿನಿಮಾದಲ್ಲಿ ನಾಯಕ ನಾಯಕಿಯನ್ನು ಅಪ್ಪಿಕೊಂಡ ಕೂಡಲೆ ಗುಡುಗು ಮಿಂಚಿನ ಮಳೆ ಸುರಿಯುವುದೇಕೆ?*
ಮಿಂಚಿಹೋದ ಕೆಲಸಕ್ಕೆ ಗುಡುಗಾಡಿದರೆ ವರ್ಷವೆಲ್ಲಾ ವೇಸ್ಟೇ ಎಂದು ಸೂಚಿಸಲು!

ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ
*ಪರಮಾತ್ಮನು ಕೊರಳಲ್ಲಿ ಹಾವುಗಳನ್ನು ಹಾಕಿಕೊಂಡಿರುವುದೇಕೆ?*
ಅಂತಹವನ್ನು ತೊಟ್ಟರೆ ಚೈನ್ ಸ್ನ್ಯಾಚರ್ಸ್ ಭಯ ಇರುವುದಿಲ್ಲವಲ್ಲ!

ನೆ.ಸು. ಆನಂದ, ಕತ್ತರಗುಪ್ಪೆ
*ಹಿಂದಿನದು ತ್ಯಾಜ್ಯಪತ್ರಿಕೆ, ಇಂದಿನದು ಪ್ರಶ್ನೆಪತ್ರಿಕೆ, ಮುಂದಿನದು ಉತ್ತರಪತ್ರಿಕೆ; ಈ ಮೂರರೊಳಗೆ ಯಾವುದು ಉತ್ತಮ?*
ನೆನ್ನೆಯ ನಾಳೆ ಮತ್ತು ನಾಳೆಯ ನಿನ್ನೆಯಾದ ಇಂದೇ! ಪ್ರಶ್ನೆ ಬಲ್ಲವನಿಗೆ ಬದುಕು ಬೆಲ್ಲ!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಮಾತೇ ಮುತ್ತು, ಮುತ್ತೇ ...... ?*
ಕುತ್ತು!

## ಬಹುಮಾನಿತ ಪ್ರಶ್ನೆ

ರಾಜು ಮರೋಳ, ಮಾಗಳ, ಬಳ್ಳಾರಿ
*ಭಾರತೀಯರಿಗೆ ಬ್ರಿಟಿಷರು ಮಧ್ಯರಾತ್ರಿ ಏಕೆ ಸ್ವಾತಂತ್ರ್ಯ ನೀಡಿದರು?*
ಅದು ಕನಸೋ, ನನಸೋ ಎಂದು ಎಂದಿಗೂ ತಿಳಿಯದಿರಲೆಂದು!

ಹಾಡ್ಯ ಜಯಾನಂದ, ಮೈಸೂರು
*ಪಾಸ್‌ಪೋರ್ಟ್, ವೀಸಾ ಮೂಲಕ ಸ್ವರ್ಗಕ್ಕೆ ಹೋಗುವಂತಾದರೆ ಏನಾಗಬಹುದು?*
ಯಮ ಏರ್‌ಲೈನ್ಸ್, ವಿಧಿ ಏರ್‌ವೇಸ್‌ಗಳಿಗೆ ವೈದ್ಯರೇ ಪೈಲಟ್ ಆಗಬಹುದು!

ಜಾಕೋಬ್ ಡಿಸೋಜ, ಕುರುವಳ್ಳಿ
*ತಂಗಾಳಿಯಾಗಿ ಬಂದವನು ಸುಳಿಗಾಳಿಯಾಗಿದ್ದಾನೆ, ಏನು ಮಾಡಲಿ?*
ಸುಳಿಗಾಳಿಯಲ್ಲವೇ, ಸುಳಿದುಹೋಗಿಬಿಡುತ್ತಾನೆ ಬಿಡಿ!

ಪಿ.ಜೆ. ರಾಘವೇಂದ್ರ, ಮೈಸೂರು
*ಎಲ್ಲರೂ ಜೈಲಿಗೆ ಹೋದರೆ ರಾಜ್ಯ ಆಳುವವರಾರು?*



ಚಿಂತಿಸಬೇಡಿ; ನಮ್ಮಲ್ಲಿ ಕಳ್ಳರು ಅಣಬೆಗಳಿಗಿಂತಲೂ ವೇಗವಾಗಿ ಹುಟ್ಟಿ ಬರುತ್ತಾರೆ!

ಆರ್.ವಿ. ಹಿರೇಮಠ, ಧಾರವಾಡ
*ಅರವತ್ತರಲ್ಲೂ ರಸಿಕತೆ ಉಳಿಯಲು ಏನು ಮಾಡಬೇಕು?*
ಮಗುವಿನ ಮುಗ್ಧತೆ, ಯೌವನದ ಆಸಕ್ತಿ ಹೊಂದಿದ್ದರೆ ಸಾಕು!

ಅರಕೆರೆ ಪಿ. ಸುರೇಶ್, ಭದ್ರಾವತಿ
*ಕನಸಿನಲ್ಲಿ ಮನಸ್ಸು ಕೊಟ್ಟಿದ್ದಾಳೆ, ನಿಜಜೀವನದಲ್ಲಿ ಪ್ರೀತಿಸುತ್ತಾಳಾ .... ?*
ಖಂಡಿತ; ಆದರೆ.... ಯಾರನ್ನು ಎಂಬುದು ಮಾತ್ರ ಅನಿಶ್ಚಿತ!

■ ರಾಮ್